# ಯುಗಾದಿಯ ನೆಪದಲ್ಲಿ...

ಖರ ಸಂವತ್ಸರ ಹಿಂದೆ ಸರಿದು, ನಂದನಕ್ಕೆ ಸ್ಥಾನ ಬಿಟ್ಟುಕೊಡುತ್ತಿದೆ. ಎಂದಿನಂತೆ ಮತ್ತೊಮ್ಮೆ ಯುಗಾದಿ ಬಂದಿದೆ. ಯುಗಾದಿಯ ಆಚರಣೆಯ ಮೂಲಕ ನಾವು ಹೊಸ ವರ್ಷಕ್ಕೆ ಸ್ವಾಗತ ಕೋರುತ್ತಿದ್ದೇವೆ. ನೂರು ವರ್ಷಗಳ ಪೂರ್ಣಾಯುಷ್ಯಕ್ಕಾಗಿ, ವಜ್ರ ಸದೃಶ ದೃಢ ಶರೀರಕ್ಕಾಗಿ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸುತ್ತಾ, ಕಷ್ಟ ಸುಖಗಳೆರಡನ್ನೂ ಸಮಚಿತ್ತದಿಂದ ಸ್ವೀಕರಿಸುವ ಸಂಕಲ್ಪದೊಂದಿಗೆ ಬೇವು ಬೆಲ್ಲಗಳ ಮಿಶ್ರಣವನ್ನು ಸೇವಿಸುವ ಪದ್ಧತಿಯನ್ನು ಮುಂದುವರಿಸುತ್ತಿದ್ದೇವೆ. ಎಲ್ಲಕ್ಕೂ ಮಿಗಿಲಾಗಿ, ಹಗಲಿರುಳುಗಳ ಆವರ್ತನದಲ್ಲಿ ಗರಗರನೆ ತಿರುಗುತ್ತಿರುವ ಬದುಕಿನ ಏಕತಾನದಿಂದ ಬಿಡುಗಡೆಗೊಂಡು, ಅರ್ಥಪೂರ್ಣ ಬದುಕನ್ನು ರೂಪಿಸಿಕೊಳ್ಳಬೇಕೆಂಬ ಹಂಬಲದೊಂದಿಗೆ ಮುಂಬರುವ ದಿನಗಳನ್ನು ಎದುರುಗೊಳ್ಳಲು ಉತ್ಸುಕರಾಗಿದ್ದೇವೆ. ಮರಗಿಡ ಬಳ್ಳಿ ಪಶುಪಕ್ಷಿಗಳು ಅಪ್ರಜ್ಞಾಪೂರ್ವಕವಾಗಿ ವಸಂತೋದಯದಲ್ಲಿ ಆಸ್ವಾದಿಸುವ ಜೀವನೋತ್ಸಾಹವನ್ನು ನಾವೂ ಪ್ರಜ್ಞಾಪೂರ್ವಕವಾಗಿ ಆವಾಹನೆ ಮಾಡಿಕೊಳ್ಳುವ ನಿಶ್ಚಯದಿಂದ ಯುಗಾದಿಯ ಸಂಭ್ರಮದಲ್ಲಿ ಪಾಲ್ಗೊಳ್ಳುತ್ತಿದ್ದೇವೆ.

ಎಲ್ಲವೂ ಸರಿ; ಆದರೆ ಕಳೆದ ವರ್ಷ, ಅದರ ಹಿಂದಿನ ವರ್ಷ– ಹೀಗೆ ಪ್ರತಿ ವರ್ಷದ ಯುಗಾದಿಯಲ್ಲೂ ಹೀಗೇ ಯೋಚಿಸಿದ್ದೆವಲ್ಲವೆ? ನಮ್ಮ ಯೋಜನೆಗಳಲ್ಲಿ, ಕಾರ್ಯಕ್ರಮಗಳ ಪಟ್ಟಿಯಲ್ಲಿ ಕಾರ್ಯರೂಪಕ್ಕೆ ಬಂದು, ಸಾಕಾರಗೊಂಡವು ಎಷ್ಟು? ನಮ್ಮಿಂದ ಜಾರಿಹೋದ ಸಂಕಲ್ಪಗಳು ಎಷ್ಟು? ಎಷ್ಟೊಂದು ಸಮಯವನ್ನು ನಾವು ಬಳಸಿಕೊಂಡಿದ್ದೇವೆ? ಇಂಥ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಂಡು, ಆತ್ಮಾವಲೋಕನ ಮಾಡಿಕೊಳ್ಳಬೇಕಾದುದೂ ಯುಗಾದಿಯ ಸಂದರ್ಭದಲ್ಲಿ ಅತ್ಯಂತ ಸಂಗತವಲ್ಲವೆ?

ಯುಗಾದಿಯೆಂಬುದು ಕಾಲಗಣನೆಗಾಗಿ ನಾವು ಇಟ್ಟುಕೊಂಡಿರುವ ಒಂದು ನಿರ್ದಿಷ್ಟ ಬಿಂದು. ಹನ್ನೆರಡು ಮಾಸಗಳ ಒಂದು ವರ್ಷದ ಅವಧಿ ಮುಗಿದು, ಇನ್ನೊಂದು ಹನ್ನೆರಡರ ಆವರ್ತನವನ್ನು ಯುಗಾದಿಯಿಂದ ಲೆಕ್ಕಹಾಕುತ್ತೇವೆ. ಹಾಗೆ ನೋಡಿದರೆ, ಕಾಲವೆಂಬುದು ಒಂದು ಅಮೂರ್ತವಾದ, ಅಭೌತಿಕವಾದ ಕಲ್ಪನೆ. ಅದಕ್ಕೆ ಆಕಾರ, ಗಾತ್ರ, ದ್ರವ್ಯ ರಾಶಿ– ಇತ್ಯಾದಿ ಯಾವುದೂ ಇಲ್ಲ. ಆದ್ದರಿಂದ ಅದನ್ನು ಯಾವ ಅಳತೆಯ ಮಾನಗಳಿಂದಲೂ ಅಳೆಯಲು ಸಾಧ್ಯವಿಲ್ಲ. ಇಂಥ ಅಮೇಯವಾದ (ಅಳೆಯಲಾಗದ) ಕಾಲವನ್ನು ಅಳೆದು, ಅದಕ್ಕೊಂದು ನಿರ್ದಿಷ್ಟ ಚೌಕಟ್ಟು ಕೊಡುವ ಪ್ರಯತ್ನದ ಫಲವಾಗಿ ನಾವೀಗ ಸೆಕೆಂಡು, ನಿಮಿಷ, ಘಂಟೆ, ದಿನ, ವಾರ, ತಿಂಗಳು, ವರ್ಷ– ಇತ್ಯಾದಿ ಪರಿಭಾಷೆಗಳನ್ನು ಬಳಸುತ್ತಿದ್ದೇವೆ; ಶತಮಾನ, ಸಹಸ್ರಮಾನ ಮುಂತಾದವುಗಳಲ್ಲದೆ; ಯುಗಗಳವರೆಗೂ ಕಾಲದ ಕಲ್ಪನೆಯನ್ನು ವಿಸ್ತೃತಗೊಳಿಸಿಕೊಂಡಿದ್ದೇವೆ; ಕಳೆದ ಕಾಲ, ಪ್ರಸ್ತುತ ಕಾಲ, ಬರುವ ಕಾಲ– ಹೀಗೆ ಕಾಲಪ್ರವಾಹವನ್ನು ಭೂತ, ವರ್ತಮಾನ, ಭವಿಷ್ಯಗಳೆಂಬ ಮೂರು ಖಂಡಗಳಲ್ಲಿ ವಿಭಜಿಸಿಕೊಂಡು, ಕಾಲ ಕಲ್ಪನೆಯನ್ನು ಸರಳೀಕರಿಸಿಕೊಳ್ಳುತ್ತೇವೆ, ಕಾಲ ಸರಳ ರೇಖಾತ್ಮಕವಾಗಿ, ಏಕಮುಖಿಯಾಗಿ ಹರಿಯುವ ನದಿಯಂತೆ ಚಲಿಸುತ್ತದೆ ಎಂಬ ಕಲ್ಪನೆ ಈ ತ್ರಿಕಾಲ ಪರಿಕಲ್ಪನೆಯ ಹಿಂದಿದೆ. ಚಕ್ರದ ಚಲನೆಯಂತೆ, ವರ್ತುಲ ಗತಿಯಲ್ಲಿ ಕಾಲ ಚಲಿಸುತ್ತದೆ ಎಂಬ ಕಲ್ಪನೆಯಿಂದ ಋತು, ಸಂವತ್ಸರ, ಯುಗಚಕ್ರ– ಮುಂತಾದ ಪರಿಕಲ್ಪನೆಗಳು ಬೆಳೆದು ಬಂದಿವೆ, ಜೈನದರ್ಶನದಲ್ಲಿ ಒಂದು ಯುಗವನ್ನು ಉತ್ಸರ್ಪಿಣಿ (ಉನ್ನತಿಯ ಕಾಲ) ಹಾಗೂ ಅವಸರ್ಪಿಣಿ (ಅವನತಿಯ ಕಾಲ) ಎಂದು ಎರಡು ಭಾಗಗಳನ್ನಾಗಿ ಕಲ್ಪಿಸಿಕೊಳ್ಳಲಾಗಿದೆ. ಈ ಎರಡು ವಿಭಾಗಗಳಲ್ಲಿ ಸುಷಮ–ಸುಷಮ (ಅತ್ಯಂತ ಸುಖ), ಸುಷಮ (ಸುಖ) ಸುಷಮ–ದುಷಮ (ಸುಖ–ದುಃಖ) ದುಷಮ (ದುಃಖ), ದುಷಮ–ದುಷಮ (ಅತಿ ದುಃಖ) ಹೀಗೆ ಆರು ಒಳವಿಭಾಗಗಳೂ ಇವೆ. ಕಾಲದ ಚಕ್ರೀಯ ಚಲನೆಯ ಪರಿಕಲ್ಪನೆಯ ಸೂಕ್ಷ್ಮ ವಿಂಗಡಣೆ ಇದು.

ಕಾಲವೆಂಬುದರ ಸ್ವರೂಪ ಏನೇ ಇರಲಿ, ಅದು ಭೌತಿಕ ಪ್ರಪಂಚದಲ್ಲಿ, ಜೀವಲೋಕದಲ್ಲಿ ಬದಲಾವಣೆ ತರುವುದಂತೂ ಸತ್ಯ. ಬಾಲ್ಯ, ತಾರುಣ್ಯ, ಯೌವನ, ವೃದ್ಧಾಪ್ಯ, ಸಾವು–ಇತ್ಯಾದಿ ಅವಸ್ಥಾಂತರಗಳಿಗೆ ಕಾರಣ ಕಾಲವೆಂಬುದು ಎಲ್ಲರಿಗೂ ತಿಳಿದಿದೆ. ಕಾಲದ ಪ್ರವಾಹದಲ್ಲಿ ಹಿರಿದಾಗಿ ಮೆರೆದಿದ್ದ ನಾಗರಿಕತೆಗಳು ನಿರ್ನಾಮವಾಗಿರುವುದನ್ನು ಇತಿಹಾಸ ದಾಖಲಿಸಿದೆ. ಆದರೆ ವಿನಾಶ ಮುಖಿಯಾದ ಕಾಲಕ್ಕೆ ವಿಕಾಸ ಮುಖವೂ ಇದೆ ಎಂಬುದನ್ನು ಮರೆಯಲಾಗದು, ಚಲಿಸುವ ಕಾಲ ಹೊಸ ಸೃಷ್ಟಿ, ಹೊಸ ಭರವಸೆ, ಹೊಸ ಕನಸುಗಳನ್ನೂ ಹೊತ್ತು ತರುವುದರಿಂದಲೇ ಬದುಕು ಆಸ್ವಾದನೀಯವೆನ್ನಿಸುತ್ತದೆ. ‘ಕಾಲವೆಂದರೆ ಏನು? ರವಿಯ ದೂರಕೆ ನಾನು ದಬ್ಬಿದೆನು; ಈ ಆತ್ಮಬಲವೇ ಕಾಲ!’ ಎನ್ನುತ್ತಾರೆ ಕುವೆಂಪು.

ನಂದನ ಸಂವತ್ಸರದ ಯುಗಾದಿಯನ್ನು ಈ ಆಧ್ಯಾತ್ಮಿಕ ಆಶಾವಾದದೊಂದಿಗೆ ಆಚರಿಸೋಣ!

■ **ವೈನತೇಯ**

## ಮಾತೇ ಮುತ್ತು

★ ನಯವಾದ ಮಾತಿನಿಂದ ಚಿಕ್ಕವಯಸ್ಸಿನ ಮಡದಿಯನ್ನು ಗೆಲ್ಲಬಹುದು!

–ಸಂಚಿ ಹೊನ್ನಮ್ಮ

★ ಶ್ರದ್ಧೆಗಿಂತ ಸಂದೇಹವೇ ಮನುಷ್ಯನ ಮನಸ್ಸಿನ ಮೂಲಧರ್ಮ. ಸಂದೇಹ ನಿವಾರಣೆಯಾಗದ ಹೊರತು ಕ್ಷೇಮವಿಲ್ಲ. ನೇಮವಿಲ್ಲದೆ ಸಂದೇಹವನ್ನು ಹತ್ತಿಕ್ಕುವುದು ಕೊನೆಗೂ ಸಾಧ್ಯವಿಲ್ಲ.

–ಗೌರೀಶ ಕಾಯ್ಕಿಣಿ

* ಈಗ ನಾವು ಪ್ರೀತಿ ಎನ್ನುವ ಪ್ರೀತಿಯು ಕೇವಲ ಕಾಯಕವಾದ ಪ್ರೀತಿ! ಪೂರ್ವದವರ ಪ್ರೀತಿ ಒಂದು ರೀತಿಯ ಅಶ್ರದ್ಧೆಯಲ್ಲಿ ಪ್ರಾರಂಭವಾದರೂ, ಕೊನೆಗೆ ಹೆಂಡತಿ ಎಂದರೆ ಲೋಕಮಾತೆಯ ಅಂಶ ಎಂಬ ಭಕ್ತಿಯಲ್ಲಿ ಮುಗಿಯುತ್ತಿತ್ತು.

–ಮಾಸ್ತಿ ವೆಂಕಟೇಶ್ ಅಯ್ಯಂಗಾರ್

★ ಕೆಲವು ಪುಸ್ತಕಗಳ ರುಚಿ ನೋಡಬೇಕು; ಕೆಲವನ್ನು ನುಂಗಬೇಕು; ಎಲ್ಲೋ ಕೆಲವನ್ನು ಓದಿ ಜೀರ್ಣಿಸಿಕೊಂಡು ಸುಖಿಸಬೇಕು.

–ಫ್ರಾನ್ಸಿಸ್ ಬೇಕನ್

★ ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು. ಬಯಕೆ ಬರುವುದರ ಕಣ್ಣನ್ನೆ ಕಾಣೋ.

–ಮಧುರ ಚೆನ್ನ

★ ಖುಷಿ ಮನುಷ್ಯ ಹಾಗೂ ಶುದ್ಧ ಹೃದಯದ ಮನುಷ್ಯನ ಕೆಲಸ ಎಂದಿಗೂ ನಿಲ್ಲುವುದಿಲ್ಲ.

–ಸರದಾರ್ ಪಟೇಲ್

★ ಮನುಷ್ಯ ಎಷ್ಟು ದೂರ ಕೈಯನ್ನು ಚಾಚುವುದು ಸಾಧ್ಯವೋ ಅಷ್ಟು ದೂರವೂ ಚಾಚಿ ಪ್ರಯತ್ನಿಸುವುದು ಅವನ ಕರ್ತವ್ಯ. ಎಲ್ಲಿ ಅವನ ಕೈ ಸಾಗದೋ –ಅಲ್ಲಿ ಬಂದದ್ದನ್ನು ಭಗವದಿಚ್ಛೆಯೆಂದು ಅಂಗೀಕರಿಸುವುದೂ ಅವನ ಕರ್ತವ್ಯ.

–ಡಿವಿಜಿ

★ ಪ್ರವಾಹದ ವೇಗದಿಂದ ಮರಳಿನ ರಾಶಿ ಕೊಚ್ಚಿಹೋಗುತ್ತದೆ. ಮತ್ತೆ ಒಂದು ಕಡೆ ಸೇರುತ್ತದೆ. ಹಾಗೆ ಕಾಲಮಹಿಮೆಯಿಂದ ಜನರು ಒಂದೆಡೆ ಸೇರುತ್ತಾರೆ ಮತ್ತೆ ಅಗಲುತ್ತಾರೆ.

–ಭಾಗವತ

★ ಪ್ರೇಮ ಸದಾ ಕೊಡುತ್ತದೆ, ಎಂದೂ ಕೇಳುವುದಿಲ್ಲ.

–ಮಹಾತ್ಮ ಗಾಂಧೀಜಿ

★ ನಗಬಲ್ಲವನು ಬಡವನಾಗಿರಲು ಸಾಧ್ಯವಿಲ್ಲ.

–ಹಿಚ್‌ಕಾಕ್

★ ದೇವತೆಗಳು, ಯಾವ ಮನುಷ್ಯನಿಗೆ ಸೋಲು ಸಂಭವಿಸಲೆಂದು ಇಚ್ಛಿಸುತ್ತಾರೋ, ಅವರ ಬುದ್ಧಿಯನ್ನು ಎಳೆದುಕೊಂಡುಬಿಡುತ್ತಾರೆ. ಆತನು ಎಲ್ಲವನ್ನೂ ತಲೆಕೆಳಗಾಗಿ ನೋಡುತ್ತಾನೆ.

–ಮಹಾಭಾರತ

★ ಆತ್ಮಶಕ್ತಿ ಇರುವವನನ್ನು ಯಾವ ದುಷ್ಟ ಶಕ್ತಿಯೂ ನಾಶಗೊಳಿಸಲಾರದು.

–ಟೈಲರ್

★ ಧೈರ್ಯಶಾಲಿಯಾದ ಎದುರಾಳಿಯನ್ನು ಮಹತ್ತರವಾದ ಬಲಶಾಲಿಯೂ ಎದುರಿಸಲಾರ.

–ಅನಾಮಿಕ